ದೈನ್ಯವೇ ಮೈವೆತ್ತಂತ್ತಿದ್ದ ಬಡರೈತನ ಎಂಟು ಸಂತಾನಗಳಲ್ಲಿ ಚಂದ್ರು ಕೊನೆಯವನು. ಮೊದಲ ಏಳು ಸಂತಾನಗಳು ಶಾಲೆಯ ಮೆಟ್ಟಿಲು ಹತ್ತದೆ ನಿರಕ್ಷರಕುಕ್ಷಿಗಳಾಗಿದ್ದು ಕೊನೆಯ ಮಗನಿಗಾದರೂ ನಾಲ್ಕಕ್ಷರ ತಲೆಗೆ ಹತ್ತಲೆಂದು ಅವನನ್ನು ಅಪ್ಪ ಕುಬೇರಲಿಂಗ ಊರಲ್ಲೆ ಇರುವ ಸರ್ಕಾರಿ ಶಾಲೆಗೆ ಸೇರಿಸಿದ್ದ. ಏಳು ತರಗತಿಗಳೆಂಬ ಸಪ್ತಸಮುದ್ರಗಳ ಸೀಮೋಲ್ಲಂಘನಕ್ಕಾಗಿ ಚಂದ್ರು ಬರೋಬ್ಬರಿ ಹದಿನೈದು ವರ್ಷಗಳನ್ನು ತೆಗೆದುಕೊಂಡಿದ್ದ. ಸರ್ಕಾರದ ಕಡ್ಡಾಯ ಶಿಕ್ಷಣ ನೀತಿಗೇ ಸವಾಲೆಸೆಯುವಂತೆ ಎರಡು ವರ್ಷಗಳಿಗೊಮ್ಮೆ ಪರೀಕ್ಷೆ ಬರೆದು ಹಾಗೂ ಹೀಗೂ ಪ್ರಾಥಮಿಕ ಶಿಕ್ಷಣ ಪೂರ್ಣಗೊಳಿಸಿದವನು ಮುಂದೆ ಓದು ತಲೆಗೆ ಹತ್ತುತ್ತಿಲ್ಲವೆಂದು ಮಗ ಹೈಸ್ಕೂಲು ಕಲಿಕೆಗೆ ತಿಲಾಂಜಲಿಯಿತ್ತಿದ್ದು ಆಗಾಗ ಕುಬೇರಲಿಂಗನನ್ನು ಕಾಡಿ ಕಂಗೆಡಿಸುತ್ತಿತ್ತು.

ತನ್ನ ಎಂಟು ಸಂತಾನಗಳಲ್ಲಿ ನಾಲ್ಕು ಹೆಣ್ಣುಮಕ್ಕಳ ಮದುವೆ ಮಾಡಿ ಗಂಡನ ಮನೆಗೆ ಕಳುಹಿಸಿ ಉಳಿದ ಮೂರು ಗಂಡುಮಕ್ಕಳನ್ನು ವ್ಯವಸಾಯದಲ್ಲಿ ಜೊತೆಯಾಗಿಸಿಕೊಂಡ ಕುಬೇರಲಿಂಗನಿಗೆ ಕೊನೆಯ ಪುತ್ರರತ್ನ ಚಂದ್ರಾಮಲಿಂಗನನ್ನು ಹಾದಿಗೆ ಹಚ್ಚುವುದೇ ದೊಡ್ಡ ಚಿಂತೆಯಾಗಿತ್ತು. ಅವನ ಚಿಂತೆಯನ್ನು ಹೋಗಲಾಡಿಸಲೆಂಬಂತೆ ಊರ ಮಧ್ಯದಲ್ಲಿರುವ ಬಸ್‌ಸ್ಟಾಪ್ ಹತ್ತಿರದ ಸಣ್ಣ ಅಳತೆಯ ಖಾಲಿ ಜಾಗವೊಂದು ಕಡಿಮೆ ಬೆಲೆಗೆ ಮಾರಾಟವಾಗುವ ಸುದ್ದಿ ಕಿವಿಗೆ ಬಿದ್ದದ್ದೆ ತಡ ಸೈಟಿನ ಮಾಲೀಕರನ್ನು ಕಾಡಿಬೇಡಿ ಜಾಗ ಖರೀದಿಸಿ ಮಗನಿಗೆ ಬೀಡಾ ಅಂಗಡಿ ಹಾಕಿಕೊಟ್ಟು ವ್ಯಾಪಾರಕ್ಕೆ ತೊಡಗಿಸಿ ನಿರಾಳನಾಗಿದ್ದ. ಅಪ್ಪನ ಹೆಸರು ಉಳಿಸುವಂತೆ ಚಂದ್ರು ಬಲುಬೇಗ ವ್ಯಾಪಾರದ ಎಲ್ಲ ಪಟ್ಟುಗಳನ್ನು ಕಲಿತು ಇಡೀ ಊರನ್ನೇ ಅಚ್ಚರಿಗೊಳಿಸಿದ್ದ. ಕಲಬುರಗಿಯ ಪಾನ್‌ಶಾಪ್‌ಗಳಲ್ಲಿ ಸಿಗುತ್ತಿದ್ದ ಚಿತ್ರವಿಚಿತ್ರವಾದ ತರೇವಾರಿ ಬೀಡಾಗಳನ್ನು ತನ್ನ ಪುಟ್ಟ ಅಂಗಡಿಯಲ್ಲೂ ಊರಿನ ಅಬಾಲ ವೃದ್ಧರಿಂದ ಮುದುಕರವರೆಗೆ ವಿವಿಧ ವಯೋಮಾನದವರ ಅಭಿರುಚಿಗನುಗುಣವಾಗಿ ತಯ್ಯಾರಿಸುವ ಕಲೆಯನ್ನು ಕರಗತ ಮಾಡಿಕೊಂಡು ಜನಪ್ರಿಯನಾದ. ಆಗಾಗ ಊರಿಗೆ ಬರುತ್ತಿದ್ದ ಪೆಂಟರ್ ತಯ್ಯಾಬನ ಹಿಂದೆ ಬಿದ್ದು 'ದಿಲ್‌ಖುಷ್ ಪಾನ್‌ಶಾಪ್ ಪ್ರೊಪ್ರಾಯಿಟರ್ ಡಿ.ಕೆ. ಚಂದ್ರು' ಎಂದು ದೊಡ್ಡ ಅಕ್ಷರಗಳಲ್ಲಿ ಬೋರ್ಡ್ ಬರೆಸಿ ಅಂಗಡಿ ಮೇಲೆ ತೂಗು ಹಾಕಿ ಊರಿನ ಇಡೀ ಜೀವಸಂಕುಲವನ್ನು ಅಚ್ಚರಿಗೆ ತಳ್ಳಿದ್ದ.

ಬೆಳಗಿನಿಂದ ರಾತ್ರಿ ಅಂಗಡಿ ಬಾಗಿಲು ಹಾಕುವವರೆಗೂ ಸಿನಿಮಾದ ಜನಪ್ರಿಯ ಹಾಡುಗಳನ್ನು ದೊಡ್ಡ ಸ್ವರದಲ್ಲಿ ಹೊರಹೊಮ್ಮಿಸುತ್ತಿದ್ದ ಬೃಹತ್ ಗಾತ್ರದ ಸ್ಪೀಕರ್‌ಗಳು ಜನರಿಗೆ ಪುಕ್ಕಟೆ ಮನರಂಜನೆ ಒದಗಿಸುತ್ತಿದ್ದವು. ಅದುವರೆಗೂ ಅಣ್ಣಾವರ ಭಕ್ತಿಗೀತೆಗಳನ್ನು ಮಾತ್ರ ಆಲಿಸಿ ಗೊತ್ತಿದ್ದ ಊರಿನವರು ಚಂದ್ರುನ ದಯೆಯಿಂದ 'ಪ್ರೀತಿಯಲ್ಲಿ ಇರೋ ಸುಖ ಗೊತ್ತೆ ಇರಲಿಲ್ಲ ಹುಂ ಅಂತೀಯಾ ಉಹುಂ ಅಂತೀಯಾ' ಹಾಡು ಕೇಳಿ ಏಕಕಾಲಕ್ಕೆ ತಮ್ಮ ಕಿವಿ ಪಾವನವಾಗಿಸಿಕೊಂಡು ಹೃದಯವನ್ನು ರೋಮಾಂಚನಗೊಳಿಸಿಕೊಂಡರು. ಯಾವ ಅಡೆತಡೆಯಿಲ್ಲದೆ ಮುನ್ನಡೆಯುತ್ತಿದ್ದ ಚಂದ್ರುನ ಬದುಕಿನ ದೋಣಿ ಶಾಂತವೀರಪ್ಪಗೌಡರ ಮಗಳು ವೈಜಯಂತಿ ಮಾಡಿದ ಒಂದು ಸಣ್ಣ ಎಡವಟ್ಟಿನಿಂದ ತನ್ನ ದೆಸೆಯನ್ನೇ ಬದಲಿಸಿತು.

ಸಿನಿಮಾ ಹುಚ್ಚಿನ ಶಾಂತವೀರಪ್ಪಗೌಡರು ನಾಲ್ಕು ಗಂಡುಮಕ್ಕಳ ನಂತರ ಹುಟ್ಟಿದ ಏಕಮಾತ್ರ ಹೆಣ್ಣುಸಂತಾನವನ್ನು ವೈಜಯಂತಿ ಎಂದು ಕರೆದು ತಮ್ಮ ಅಚ್ಚುಮೆಚ್ಚಿನ ಸಿನಿಮಾ ನಟಿಯ ಬಗ್ಗೆ ತಮಗಿರುವ ಅಭಿಮಾನ ಮೆರೆದಿದ್ದರು. ಊರಿನ ಸರ್ಕಾರಿ ಶಾಲೆಯಲ್ಲಿ ಏಳನೇ ತರಗತಿವರೆಗೆ ಓದಿದ ವೈಜಯಂತಿ ಹೈಸ್ಕೂಲು ಸೇರಲು ಪಟ್ಟಣಕ್ಕೆ ಹೋಗುತ್ತೆನೆಂದು ಹಟ ಹಿಡಿದಾಗ ಗೌಡರು ಹೌಹಾರಿದ್ದರು. ದಿನದಿನಕ್ಕೂ ವಯಸ್ಸನ್ನು ಮೀರಿ ಬೆಳೆಯುತ್ತಿರುವ ಮಗಳ ದೇಹ ಅವರ ಆತಂಕಕ್ಕೆ ಕಾರಣವಾಗಿತ್ತು. ಬೆಳದಿಂಗಳ ಬಣ್ಣದ ದೇಹಕಾಂತಿ, ವಿಶಾಲ ನೇತ್ರಗಳು, ನೀಳಮೂಗು, ತುಂಬಿದೆದೆ, ಬಳಕು ಸೊಂಟದ ವೈಜಯಂತಿ ಸ್ಫುರದ್ರೂಪಿ ಹೆಣ್ಣು. ದಾರಿಯಲ್ಲಿ ಅವಳು ನಡೆದು ಹೋಗುತ್ತಿದ್ದರೆ ಒಮ್ಮೆ ನೋಡಿದರೆ ಮತ್ತೊಮ್ಮೆ ನೋಡಬೇಕೆನ್ನುವಷ್ಟು ಸುಂದರಿ. ಇಂಥ ರೂಪವತಿ ಮಗಳನ್ನು ಪಟ್ಟಣದ ಶಾಲೆಗೆ ಸೇರಿಸುವುದು ಗೌಡರಿಗೆ ಸುತರಾಂ ಇಷ್ಟವಿರಲಿಲ್ಲ. ವೈಜಯಂತಿ ಅನ್ನ ನೀರು ಬಿಟ್ಟು ಒಂದೆರಡು ದಿನ ಮುಷ್ಕರ ಹೂಡಿದಾಗ ಮೆತ್ತಗಾದ ಗೌಡರು ಮನಸ್ಸು ಬದಲಿಸಿ ಪಕ್ಕದೂರು ಕಲ್ಲಹಂಗರಗಾದ ಶಾಲೆಗೆ ಸೇರಲು ಅನುಮತಿಸಿದರು.